

# ಈ ಸಾವು ನ್ಯಾಯವೇ...

ಗರ್ಭವತಿಯಾಗಿದ್ದ ಆ ಕಡವೆ ಸಾವಿಗೀಡಾದುದು ಯಾರಿಂದ? ಅರಣ್ಯ ಇಲಾಖೆಯವರ ನಿರ್ಲಕ್ಷ್ಯದಿಂದಲೋ ಅಥವಾ ಕಾಡು ನಾಯಿಗಳಿಂದಲೋ?

■ ಸಹನಾ ಕಾಂತಬೈಲು

ಬೆಳಿಗ್ಗೆ ಕೂಲಿಯಾಳುಗಳಿಗೆ ತಿಂಡಿ ತಯಾರಿಸುವ ಗಡಿಬಿಡಿಯಲ್ಲಿದ್ದೆ. ಹತ್ತಿರದಲ್ಲೇ ಇದ್ದ ಮನೆಗೆಲಸದವಳ ಮೊಬೈಲಿಗೆ ಒಂದು ಕರೆ ಬಂತು. ಕರೆ ಸ್ವೀಕರಿಸಿದ ಅವಳು, 'ಏನು ಕಡವೆಯನ್ನು ಕಟ್ಟಿ ಹಾಕಿದ್ದಾ? ಅದನ್ನು ನೋಡಲು ಏನುಂಟು? ಕೆಲಸಕ್ಕೆ ರಜೆ ಹಾಕಿ ನಾನು ಬರುವುದಿಲ್ಲ' ಎಂದು ಹೇಳುವುದು ಕೇಳಿಸಿತು. ವನ್ಯಪ್ರಾಣಿಗಳ ಬಗ್ಗೆ ಕಾಳಜಿ ಇರುವ ನನಗೆ ಕಡವೆ ಎಂಬ ಶಬ್ದ ಕಿವಿಗೆ ಬಿದ್ದಾಗ ಕುತೂಹಲ ಉಂಟಾಯಿತು.

'ಯಾರು ಫೋನ್ ಮಾಡಿದ್ದು? ಏನು ವಿಷಯ?' ಎಂದು ಕೇಳಿದ್ದಕ್ಕೆ ಹೇಳಿದಳು: 'ಮಗಳು ಫೋನ್ ಮಾಡಿದ್ದು ಅಕ್ಕಾ. ನನ್ನ ಮನೆ ಸಮೀಪ ಇರುವ ಹೊಳೆಗೆ ಸೇತುವೆ ಕಟ್ಟುತ್ತಾ ಇದ್ದಾರಲ್ಲ, ಅಲ್ಲಿ ಒಂದು ಕಡವೆ ಕಟ್ಟಿ ಹಾಕಿದ್ದಾರಂತೆ. ಅದನ್ನು ನೋಡಲು ಮಗಳು ಕರೆದಿದ್ದಾಳೆ. ನನಗೆ ಕಡವೆ ಹೊಸದೇನೂ ಅಲ್ಲ. ನಾನು ಹೋಗುವುದಿಲ್ಲ. ನೀವು ಹೋಗುವುದಾದರೆ ಹೋಗಿ'.

'ಅದು ಅಲ್ಲಿಗೆ ಯಾಕೆ ಬಂತಂತೆ? ಅಸಾಮಾನ್ಯ ಓಟದ ಪ್ರಾಣಿಯಾದ ಅದನ್ನು ಹೇಗೆ ಕಟ್ಟಿಹಾಕಿದರು? ಗೊತ್ತಾಗಿದ್ಯಾ?' ಪ್ರಶ್ನಿಸಿದೆ.

'ಕಾಡು ನಾಯಿಗಳು ಅದನ್ನು ಅಟ್ಟಿಸುತ್ತಿದ್ದವಂತೆ. ಅದು ಓಡುತ್ತ ಓಡುತ್ತ ಹೊಳೆ ದಾಟಿ ಆಚೆ ದಡದಲ್ಲಿರುವ ಅಡಿಕೆ ತೋಟಕ್ಕೆ ಕಾಲಿಟ್ಟಿತಂತೆ. ಓಡುವ ರಭಸಕ್ಕೆ ಅಲ್ಲಿರುವ ಕೆಸರಿನ ಹೊಂಡಕ್ಕೆ ಬಿದ್ದು ಎಷ್ಟು ಪ್ರಯತ್ನಿಸಿದರೂ ಏಳಲಾಗಲಿಲ್ಲವಂತೆ. ಇದನ್ನು ನೋಡುತ್ತಿದ್ದ, ಅಲ್ಲಿಯೇ ಇದ್ದ ಸೇತುವೆ ಕೆಲಸಗಾರರು ಅದು ಹಸುವೆಂದು ಭ್ರಮಿಸಿ, ಅದನ್ನು ಅಲ್ಲಿಂದ ಎಬ್ಬಿಸಿ ಕಟ್ಟಿ ಹಾಕಿದರಂತೆ. ಅವರು ನಮ್ಮೂರಿನವರಲ್ಲ; ಗದಗದವರು. ಅವರಿಗೆ ಕಡವೆಯನ್ನು ನೋಡಿ ಗೊತ್ತಿಲ್ಲ. ಆಮೇಲೆ ಅವರಿಗೆ ಅದು ಕಾಡುಪ್ರಾಣಿಯೆಂದು ಗೊತ್ತಾಯಿತಂತೆ' ಎಂದು ಉತ್ತರ ಕೊಟ್ಟಳು.

'ಹಾಗಾದರೆ ನಾನು ಹೋಗುತ್ತೇನೆ. ನಾನು ಕಡವೆ ನೋಡಬೇಕು' ಎಂದೆ.

ರಕ್ಷಿತಾರಣ್ಯಕ್ಕೆ ಹೊಂದಿಕೊಂಡಿರುವ ನಮ್ಮೂರಿನಲ್ಲಿ ಆಗಾಗ ಕಾಡುಪ್ರಾಣಿಗಳ ದರ್ಶನವಾಗುತ್ತಾ ಇರುತ್ತದೆ. ಕೆಲವು ಕಿಡಿಗೇಡಿಗಳು ಕಾಡಿಗೆ ಹೋಗಿ ಪ್ರಾಣಿಗಳನ್ನು ಬೇಟೆಯಾಡಿ ತಿನ್ನುವುದೂ ಇದೆ. ತಿಂಗಳ ಹಿಂದಷ್ಟೇ ನಮ್ಮ ಮನೆ ಸಮೀಪ ಒಬ್ಬ ಹಂದಿಗೆಂದು ಕೋವಿ ಕಟ್ಟಿದ್ದ. ಆದರೆ ಅದಕ್ಕೆ ಹಂದಿ ಬದಲಾಗಿ ಕಡವೆ ಬಿದ್ದಿತ್ತು. ಅದು ಮನೆಗೆ ಸಾಗಿಸಲು ಸಾಧ್ಯವಿಲ್ಲದಷ್ಟು ದೊಡ್ಡದಿದ್ದುದರಿಂದ ಅವನು ಪಕ್ಕದ ಮನೆಯವನೊಡಗೂಡಿ ಅಲ್ಲೇ ಅದರ ಕೈಕಾಲು, ಹೊಟ್ಟೆ, ತಲೆ ಬೇರ್ಪಡಿಸಿ ಮಾಂಸ ಮಾಡುವ ಸಮಯದಲ್ಲಿ ಯಾರೋ ಅರಣ್ಯಾಧಿಕಾರಿಗಳಿಗೆ ಫೋನ್ ಮಾಡಿದ್ದರು. ತಕ್ಷಣ ಬಂದ ಅಧಿಕಾರಿಗಳು ಅವರಿಬ್ಬರನ್ನು ಮಾಲು ಸಮೇತ ಜೀಪಿಗೆ ಹಾಕಿ ಮಡಿಕೇರಿ ಪೊಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋದರು. ನಾನು ಅವರಿನ್ನು ಕಳ್ಳಬೇಟೆ ಅಪರಾಧಕ್ಕಾಗಿ ಜೈಲಿನಲ್ಲಿ ಕೊಳೆಯುತ್ತಿರುತ್ತಾರೆ ಅಂದುಕೊಂಡಿದ್ದೆ. ಆದರೆ ಹಾಗೇನೂ ಆಗಲಿಲ್ಲ. ಯಾವುದೋ ಪ್ರಾಣಿಯ ದಾಳಿಗೆ ಒಳಗಾಗಿ ಸತ್ತು ಹೊಳೆಯಲ್ಲಿ ತೇಲಿಕೊಂಡು ಬಂದ ಕಡವೆಯನ್ನು ತಿನ್ನುವ ಉದ್ದೇಶದಿಂದ ಕತ್ತರಿಸಿದ್ದೇ ಹೊರತು ಗುಂಡು ಹಾರಿಸಿ ಕೊಂದದ್ದಲ್ಲ ಎಂದು ಅಪರಾಧಿ ಪರ ವಕೀಲರು ವಾದಿಸಿ ಕೇಸು ಬಿದ್ದು ಹೋಗುವಂತೆ ಮಾಡಿದರು. ಹೀರೊ ಪೋಸು ಕೊಡುತ್ತ ಅಪರಾಧಿಗಳು ಎರಡೇ ದಿನದಲ್ಲಿ ಊರಿಗೆ ವಾಪಸಾದರು.